**<u>ದಿನಾಂಕಃ 22.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು:- ವಾದಿ ಪರ ಶ್ರೀ ಎನ್.ಟಿ. ವಕೀಲರಿಂದಃ</u>**

1) ನಿಡಿ.5 ರ ಅನುಮೋದಿತ ನಕಾಶೆಯ ಪ್ರಕಾರ ನಾನು ಕಟ್ಟಡವನ್ನು ನಿರ್ಮಾಣ ಮಾಡಿರುತ್ತೇನೆ. ದಾವಾ ಎ ಅನುಸೂಚಿ ಸ್ವತ್ತಿನ ಉತ್ತರ ದಿಕ್ಕಿಗೆ ಹೊಂದಿಕೊಂಡಂತೆ ವಾದಿಯ ಸ್ವತ್ತು ಇದೆ ಎಂದರೆ ಸರಿ. ನಮ್ಮ ಕಟ್ಟಡಕ್ಕೆ ಕ್ಯೂರಿಂಗ್ ಮಾಡುವ ಕಾಲಕ್ಕೆ ನನಗೂ ಮತ್ತು ವಾದಿಗೂ ಗೋಡೆ ವಸ್ತಿ ಹಿಡಿಯು ಕಾರಣ ಮನಸ್ತಾಪ ಆಗಿತ್ತು ಎಂದರೆ ಸರಿಯಲ್ಲ. ದಾವಾ ಎ ಅನುಸೂಚಿ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಕಿಟಕಿಯನ್ನು ಅಳವಡಿಸಿದ್ದೇನೆ ಎಂದರೆ ಸರಿ. ನಮ್ಮ ಆಸ್ಪತ್ರೆಯಿಂದ ಟಿಂಚರ್ ಮತ್ತು ಇನ್ನಿತರೆ ಔಷಧಿಯ ವಾಸನೆಯು ಕಿಟಕಿ ಮೂಲಕ ಹೊರ ಹೋಗುತ್ತದೆ ಎಂದರೆ ಸರಿಯಲ್ಲ.

2) ನಮ್ಮ ಕಟ್ಟಡದ ಛಾವಣಿಯ ನೀರು ನಮ್ಮ ಕಟ್ಟಣದ ದಕ್ಷಿಣದ ಕಡೆಯಿಂದ ಹರಿದು ಹೋಗುತ್ತದೆ. ನಮ್ಮ ಕಟ್ಟಡದ ಛಾವಣಿಯ ನೀರು ದಾವಾ ಎ ಅನುಸೂಚಿ ಸ್ವತ್ತಿನ ಉತ್ತರದ ಕಡೆ ಬೀಳುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ, ಚನ್ನಪಟ್ಟಣ.**